**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ: 21-03-2025**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ: ವಾದಿಗಳಪರ ಶ್ರೀ ಎಸ್.ವಿ.ಎ. ವಕೀಲರಿಂದ:-**

ಈ ಪ್ರಕರಣದಲ್ಲಿ ನಾನು 2ನೇ ವಾದಿಯಿದ್ದು, ಪ್ರಕರಣಕ್ಕೆ ಸಂಬಂಧಪಟ್ಟಂತೆ, ಸರ್ವೆ ನಂ.444/1 ರ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಪಿ-1, ಸರ್ವೆ ನಂ.652 ವಿವಿಧ ವರ್ಷಗಳ ಆರು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 7 ಎಂದು ಗುರುತಿಸಲಾಯಿತು. ದಾವಾಸ್ತಿಗಳಿಗೆ ಸಂಬಂಧಿಸಿದಂತೆ, ನಾಲ್ಕು ಮ್ಯುಟೇಶನ್ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ 11 ಎಂದು ಗುರುತಿಸಲಾಯಿತು. ನಾವು ಸಲ್ಲಿಸಿದ ಫಾರ್ಮ್ ನಂ-7 ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಭೂನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಫಾರ್ಮ್ ನಂ-10 ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಹೊನ್ನಾವರ ಹಿರಿಯ ನ್ಯಾಯಾಲಯದ ಆರ್. ಎ. ನಂ-39/2010 ರ ಡಿಕ್ರಿ ಮತ್ತು ತೀರ್ಪಿನ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ಸರ್ವೆಯರ್ ನೀಡಿದ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ಎ.ಡಿ.ಎಲ್.ಆರ್. ರವರಿಗೆ ನಾವು ಸಲ್ಲಿಸಿದ ಅರ್ಜಿಯ ಸ್ವೀಕೃತಿ ಪ್ರತಿ ಮತ್ತು ಅವರು ನೀಡಿದ ಹಿಂಬರಹದ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ಸರ್ವೆ ನಂ.652 ರ ಸರ್ವೆ ನಕ್ಷೆಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ವಿನಂತಿ.

**ಪಿ.ಡಬ್ಲ್ಯು: 1**

**ಪಾಟೀಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಜಿ. ವಕೀಲರಿಂದಃ-**

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**